Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

It Contains the text of 10 Acts (Kannada

**( EXTRAORDINARY )**

( ವಿಶೇಷ ಸಂಚಿಕೆ )


भाग IX अनुभाग 1

PART IX SECTION 1

ಭಾಗ IX ವಿಭಾಗ 1

**प्राधिकार से प्रकाशित**

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | | |
|---|---|---|---|
| सं. १ | नई दिल्ली, सोमवार, नवेंबर १६, २००९ | कार्तीक २५, १९३१ (शका) | खंड. ४१ |
| No. 1 | New Delhi, Monday, November 16, 2009 | Karthika 25, 1931 (Saka) | Vol. 41 |
| ಸಂ. ೧ | ನವ ದೆಹಲಿ, ಸೋಮವಾರ, ನವೆಂಬರ್ ೧೬, ೨೦೦೯ | ಕಾರ್ತೀಕ ೨೫, ೧೯೩೧ (ಶಕ) | ಸಂಪುಟ. ೪೧ |


**Ministry of Law and Justice**

(Legislative Department)

New Delhi, 16th November, 2009

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 16ನೇ ನವೆಂಬರ್, 2009**

The Translation in Kannada of the following Acts, namely :- (1) The Petroleum Act, 1934 (2) The Election Commission (Conditions of Service of Election Commissioners and Transaction of Business) Act, 1991 (3) The National Commission for Backward Classes Act, 1993 (4) The Lotteries (Regulation) Act, 1998 (5) The Advocates' Welfare Fund Act, 2001 (6) The Indian Council of World Affairs Act, 2001 (7) The Delimitation Act, 2002 (8) The Cigarettes and Other Tobacco Products (Prohibition of Advertisement and Regulation of Trade and Commerce, Production, Supply and Distribution) Act, 2003 (9) The Protection of Women from Domestic Violence Act, 2005 (10) The Prohibition of Child Marriage Act, 2006 - are hereby published under the authority of the President and shall be deemed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :- (1) ಪೆಟ್ರೋಲಿಯಂ ಅಧಿನಿಯಮ, 1934 (2) ಚುನಾವಣಾ ಆಯೋಗ (ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ವ್ಯವಹಾರ ನಿರ್ವಹಣೆ) ಅಧಿನಿಯಮ, 1991 (3) ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1993 (4) ಲಾಟರಿಗಳ (ವಿನಿಯಮನ) ಅಧಿನಿಯಮ, 1998 (5) ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001 (6) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಅಧಿನಿಯಮ, 2001 (7) ಸೀಮಾ ನಿರ್ಣಯ ಅಧಿನಿಯಮ, 2002 (8) ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 2003 (9) ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (10) ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಸೀಮಾ ನಿರ್ಣಯ ಅಧಿನಿಯಮ, 2002

## (2002ರ ಅಧಿನಿಯಮ ಸಂಖ್ಯೆ 33)

[3ನೇ ಜೂನ್, 2002]

ರಾಜ್ಯಗಳಿಗೆ ಲೋಕಸಭೆಯಲ್ಲಿ ಸ್ಥಾನಗಳ ಹಂಚಿಕೆಯ ಮರುಹೊಂದಾಣಿಕೆಗಾಗಿ, ಪ್ರತಿಯೊಂದು ರಾಜ್ಯದ ವಿಧಾನಸಭೆಯ ಸ್ಥಾನಗಳ ಒಟ್ಟು ಸಂಖ್ಯೆಗಾಗಿ, ಲೋಕಸಭೆಗೆ ಮತ್ತು ರಾಜ್ಯಗಳ ವಿಧಾನ ಸಭೆಗಳಿಗೆ ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಚುನಾವಣೆ ನಡೆಸುವುದಕ್ಕಾಗಿ, ವಿಧಾನ ಸಭೆಯನ್ನು ಹೊಂದಿರುವ ಪ್ರತಿಯೊಂದು ರಾಜ್ಯ ಮತ್ತು ಪ್ರತಿಯೊಂದು ಒಕ್ಕೂಟ ರಾಜ್ಯಕ್ಷೇತ್ರವನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಭಾಗಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. **ಚಿಕ್ಕ ಹೆಸರು.**- ಈ ಅಧಿನಿಯಮವನ್ನು ಸೀಮಾ ನಿರ್ಣಯ ಅಧಿನಿಯಮ, 2002 ಎಂದು ಕರೆಯತಕ್ಕದ್ದು.

2. **ಪರಿಭಾಷೆಗಳು.**-ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅನುಚ್ಛೇದ" ಎಂದರೆ ಸಂವಿಧಾನದ ಅನುಚ್ಛೇದ ಎಂದು ಅರ್ಥ;

(ಬಿ) "ಸಹಸದಸ್ಯ" ಎಂದರೆ 5ನೇ ಪ್ರಕರಣದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯ ಎಂದು ಅರ್ಥ;

(ಸಿ) "ಆಯೋಗ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿತವಾದ ಸೀಮಾ ನಿರ್ಣಯ ಆಯೋಗ ಎಂದು ಅರ್ಥ;

(ಡಿ) "ಚುನಾವಣಾ ಆಯೋಗ" ಎಂದರೆ 324ನೇ ಅನುಚ್ಛೇದದಲ್ಲಿ ಉಲ್ಲೇಖಿತವಾದ ಚುನಾವಣಾ ಆಯೋಗ ಎಂದು ಅರ್ಥ;

(ಇ) "ಸದಸ್ಯ" ಎಂದರೆ ಆಯೋಗದ ಸದಸ್ಯ ಎಂದು ಅರ್ಥ ಮತ್ತು ಇದು ಅಧ್ಯಕ್ಷನನ್ನು ಒಳಗೊಳ್ಳುತ್ತದೆ; ಮತ್ತು

(ಎಫ್) "ರಾಜ್ಯ"ವು ವಿಧಾನಸಭೆಯನ್ನು ಹೊಂದಿರುವ ಒಕ್ಕೂಟ ರಾಜ್ಯಕ್ಷೇತ್ರವನ್ನು ಒಳಗೊಳ್ಳುತ್ತದೆ, ಆದರೆ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಒಳಗೊಳ್ಳುವುದಿಲ್ಲ.

3. **ಸೀಮಾ ನಿರ್ಣಯ ಆಯೋಗದ ರಚನೆ.**- ಈ ಅಧಿನಿಯಮದ ಪ್ರಾರಂಭದ ನಂತರ, ಸಾಧ್ಯವಾದಷ್ಟು ಬೇಗನೆ, ಕೇಂದ್ರ ಸರ್ಕಾರವು ಸೀಮಾ ನಿರ್ಣಯ ಅಯೋಗವೆಂದು ಕರೆಯಲಾಗುವ ಅಯೋಗವನ್ನು ರಚಿಸತಕ್ಕದ್ದು, ಇದು ಈ ಕೆಳಗಿನ ಮೂವರು ಸದಸ್ಯರನ್ನು ಒಳಗೊಂಡಿರತಕ್ಕದ್ದು:-

(ಎ) ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಒಬ್ಬ ಸದಸ್ಯ, ಅವನು ಆಯೋಗದ ಅಧ್ಯಕ್ಷನಾಗಿರತಕ್ಕದ್ದು;

(ಬಿ) ಮುಖ್ಯ ಚುನಾವಣಾ ಆಯುಕ್ತ ಅಥವಾ ಮುಖ್ಯ ಚುನಾವಣಾ ಆಯುಕ್ತನು ನಾಮನಿರ್ದೇಶನ ಮಾಡಿದ ಒಬ್ಬ ಚುನಾವಣಾ ಆಯುಕ್ತ, ಪದನಿಮಿತ್ತ:

ಪರಂತು, ಈ ಖಂಡದ ಮೇರೆಗೆ ಚುನಾವಣಾ ಆಯುಕ್ತನನ್ನು ಸದಸ್ಯನನ್ನಾಗಿ ನಾಮನಿರ್ದೇಶನ ಮಾಡಿದ ನಂತರ, 6ನೇ ಪ್ರಕರಣದ ಮೇರೆಗೆ ಅಂಥ ಸದಸ್ಯನ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿ ಮಾಡಿದ ಹೊರತು, ಈ ಖಂಡದ ಮೇರೆಗೆ ಯಾವುದೇ ಮತ್ತಷ್ಟು ನಾಮನಿರ್ದೇಶನವನ್ನು ಮಾಡತಕ್ಕದ್ದಲ್ಲ; ಮತ್ತು

(ಸಿ) ಸಂಬಂಧಪಟ್ಟ ರಾಜ್ಯದ ರಾಜ್ಯ ಚುನಾವಣಾ ಆಯುಕ್ತ, ಪದನಿಮಿತ್ತ.

**ವಿವರಣೆ.**– (ಸಿ) ಖಂಡದ ಉದ್ದೇಶಗಳಿಗಾಗಿ, ಸಂಬಂಧಪಟ್ಟ ರಾಜ್ಯದ ರಾಜ್ಯ ಚುನಾವಣಾ ಆಯಕ್ತ ಎಂದರೆ:–

(i) ಒಂದು ರಾಜ್ಯಕ್ಕೆ (ಮೇಘಾಲಯ, ಮಿಜೋರಾಂ ಮತ್ತು ನಾಗಾಲ್ಯಾಂಡ್ ರಾಜ್ಯಗಳನ್ನು ಹೊರತುಪಡಿಸಿ) ಸಂಬಂಧಿಸಿದ ಆಯೋಗದ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ, 243ಕೆ ಅನುಚ್ಛೇದದ (1)ನೇ ಖಂಡದ ಮೇರೆಗೆ ಆ ರಾಜ್ಯದ ರಾಜ್ಯಪಾಲನು ನೇಮಕ ಮಾಡಿದ ರಾಜ್ಯ ಚುನಾವಣಾ ಆಯುಕ್ತ;

(ii) ಸಂದರ್ಭಾನುಸಾರ, ಮೇಘಾಲಯ ರಾಜ್ಯ ಅಥವಾ ಮಿಜೋರಾಂ ರಾಜ್ಯ ಅಥವಾ ನಾಗಾಲ್ಯಾಂಡ್ ರಾಜ್ಯಕ್ಕೆ ಸಂಬಂಧಿಸಿದ ಆಯೋಗದ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಅಂಥ ಉದ್ದೇಶಗಳಿಗಾಗಿ ಆ ರಾಜ್ಯದ ರಾಜ್ಯಪಾಲನಿಂದ ನಾಮನಿರ್ದೇಶನಗೊಂಡ ವ್ಯಕ್ತಿ.

4. **ಆಯೋಗದ ಕರ್ತವ್ಯಗಳು.**– (1) ಸೀಮಾ ನಿರ್ಣಯ ಅಧಿನಿಯಮ, 1972ರ 3ನೇ ಪ್ರಕರಣದ ಮೇರೆಗೆ ರಚಿತವಾದ ಸೀಮಾ ನಿರ್ಣಯ ಆಯೋಗವು 1971ನೇ ವರ್ಷದಲ್ಲಿ ನಡೆಸಿದ ಜನಗಣತಿಯಲ್ಲಿ ಖಚಿತಪಡಿಸಿದಂತೆ ಜನಗಣತಿ ಅಂಕಿ ಅಂಶಗಳ ಆಧಾರದ ಮೇಲೆ, ಹಲವು ರಾಜ್ಯಗಳಿಗೆ ಲೋಕಸಭೆಯಲ್ಲಿ ಮಾಡಿದ ಸ್ಥಾನಗಳ ಹಂಚಿಕೆಯನ್ನು ಮತ್ತು ಪ್ರತಿಯೊಂದು ರಾಜ್ಯದ ವಿಧಾನಸಭೆಯಲ್ಲಿ ಸ್ಥಾನಗಳ ಒಟ್ಟು ಸಂಖ್ಯೆಯ ಬಗ್ಗೆ ಮಾಡಿದ ಮರುಹೊಂದಾಣಿಕೆಯನ್ನು ಈ ಅಧಿನಿಯಮದ (1972ರ 76) ಉದ್ದೇಶಗಳಿಗಾಗಿ ಆಯೋಗವು ಮಾಡಿದ ಮರುಹೊಂದಣಿಕೆಯೆಂಬುದಾಗಿ ಭಾವಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ಆಯೋಗವು 2001ನೇ ವರ್ಷದಲ್ಲಿ ನಡೆಸಿದ ಜನಗಣತಿಯಲ್ಲಿ ಖಚಿತಪಡಿಸಿದಂತೆ ಜನಗಣತಿ ಅಂಕಿ ಅಂಶದ ಆಧಾರದ ಮೇಲೆ ಲೋಕಸಭೆಗೆ ಮತ್ತು ರಾಜ್ಯ ವಿಧಾನಸಭೆಗೆ ಚುನಾವಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಪ್ರತಿಯೊಂದು ರಾಜ್ಯವನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಭಾಗಿಸುವುದನ್ನು ಮರುಹೊಂದಾಣಿಕೆ ಮಾಡತಕ್ಕದ್ದು:

ಪರಂತು, ಅಂಥ ಮರುಹೊಂದಾಣಿಕೆಯ ಮೇಲೆ ಒಂದು ರಾಜ್ಯಕ್ಕೆ ಲೋಕಸಭೆಯಲ್ಲಿ ಒಂದೇ ಒಂದು ಸ್ಥಾನವನ್ನು ಹಂಚಿಕೆ ಮಾಡಿರುವಲ್ಲಿ, ಆ ಇಡೀ ರಾಜ್ಯವು, ಆ ರಾಜ್ಯದಿಂದ ಲೋಕಸಭೆಗೆ ಚುನಾವಣೆಗಳನ್ನು ನಡೆಸುವ ಉದ್ದೇಶಗಳಿಗಾಗಿ ಒಂದೇ ಪ್ರಾದೇಶಿಕ ಚುನಾವಣಾ ಕ್ಷೇತ್ರವಾಗಿ ರೂಪುಗೊಳ್ಳತಕ್ಕದ್ದು.

5. **ಸಹಸದಸ್ಯರು.**– (1) ಆಯೋಗವು, ಪ್ರತಿಯೊಂದು ರಾಜ್ಯಕ್ಕೆ ಸಂಬಂಧಿಸಿದಂತೆ ತನ್ನ ಕರ್ತವ್ಯಗಳಿಗೆ ನೆರವು ನೀಡುವ ಉದ್ದೇಶಕ್ಕಾಗಿ ಹತ್ತು ಜನರನ್ನು ತನ್ನೊಂದಿಗೆ ಸೇರಿಸಿಕೊಳ್ಳತಕ್ಕದ್ದು, ಅವರಲ್ಲಿ ಐವರು ಆ ರಾಜ್ಯವನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯರಾಗಿರತಕ್ಕದ್ದು ಮತ್ತು ಐವರು ಆ ರಾಜ್ಯದ ವಿಧಾನಸಭೆಯ ಸದಸ್ಯರಾಗಿರತಕ್ಕದ್ದು:

ಪರಂತು, ಯಾವುದೇ ರಾಜ್ಯವನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯರ ಸಂಖ್ಯೆಯು ಐದು ಅಥವಾ ಅದಕ್ಕಿಂತ ಕಡಿಮೆಯಿರುವಲ್ಲಿ, ಆಗ ಅಂಥ ಎಲ್ಲ ಸದಸ್ಯರು ಆ ರಾಜ್ಯದ ಸಹ ಸದಸ್ಯರಾಗಿರತಕ್ಕದ್ದು ಮತ್ತು ಐದಕ್ಕಿಂತ ಕಡಿಮೆಯಿರುವ ಸಂದರ್ಭದಲ್ಲಿ ಸಹ ಸದಸ್ಯರ ಒಟ್ಟು ಸಂಖ್ಯೆಯು, ಆ ರಾಜ್ಯವನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯರ ಒಟ್ಟು ಸಂಖ್ಯೆಯು ಐದಕ್ಕಿಂತ ಎಷ್ಟು ಕಡಿಮೆಯಿರುತ್ತದೆಯೋ ಆ ಸಂಖ್ಯೆಯಷ್ಟು, ಹತ್ತರಲ್ಲಿ ಕಡಿಮೆಯಾಗತಕ್ಕದ್ದು.

(2) ಪ್ರತಿಯೊಂದು ರಾಜ್ಯದಿಂದ ಹಾಗೆ ಸೇರಿಸಿಕೊಳ್ಳಬೇಕಾದ ವ್ಯಕ್ತಿಗಳನ್ನು, ಅವರು ಲೋಕಸಭೆಯ ಸದಸ್ಯರಾಗಿರುವ ಸಂದರ್ಭದಲ್ಲಿ, ಆ ಸದನದ ಸಭಾಧ್ಯಕ್ಷನು ಮತ್ತು ವಿಧಾನಸಭೆಯ ಸದಸ್ಯರ ಸಂದರ್ಭದಲ್ಲಿ, ಆ ಸಭೆಯ ಸಭಾಧ್ಯಕ್ಷನು, ಸದನದ ಅಥವಾ ಸಂದರ್ಭಾನುಸಾರ ಸಭೆಯ ರಚನೆಯ ಬಗ್ಗೆ ಯುಕ್ತ ಗಮನವಿಟ್ಟು, ನಾಮನಿರ್ದೇಶನ ಮಾಡತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಮಾಡಬೇಕಾದ ಮೊದಲ ನಾಮನಿರ್ದೇಶನಗಳನ್ನು,–

(ಎ) ಈ ಅಧಿನಿಯಮದ ಪ್ರಾರಂಭದ ಒಂದು ತಿಂಗಳೊಳಗಾಗಿ ಆಯಾ ವಿಧಾನಸಭೆಗಳ ಸಭಾಧ್ಯಕ್ಷನು ಮತ್ತು ಎರಡು ತಿಂಗಳುಗಳೊಳಗಾಗಿ ಲೋಕಸಭೆಯ ಅಧ್ಯಕ್ಷನು ಮಾಡತಕ್ಕದ್ದು; ಮತ್ತು

(ಬಿ) ಮುಖ್ಯ ಚುನಾವಣಾ ಆಯುಕ್ತನಿಗೆ ಮತ್ತು ವಿಧಾನಸಭೆಯ ಅಧ್ಯಕ್ಷನು ನಾಮನಿರ್ದೇಶನಗಳನ್ನು ಮಾಡಿರುವಲ್ಲಿ ಲೋಕಸಭಾಧ್ಯಕ್ಷರಿಗೂ ಸಹ ತಿಳಿಸತಕ್ಕದ್ದು.

(4) ಆಯೋಗದ ಯಾವುದೇ ತೀರ್ಮಾನದ ಬಗ್ಗೆ ಸಹ ಸದಸ್ಯರಲ್ಲಿ ಯಾರೂ ಮತ ಚಲಾಯಿಸುವ ಅಥವಾ ಸಹಿ ಮಾಡುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(5) ಆಯೋಗವು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವ್ಯಕ್ತಿಗಳು ನೀಡಿದ ನೆರವಿನ ಜತೆಗೆ, ತನಗೆ ನೆರವು ನೀಡುವುದಕ್ಕೆ ಆಯೋಗವು ಯಾರ ಪರಿಣಿತಿ ಮತ್ತು ಜ್ಞಾನವನ್ನು ಅವಶ್ಯವೆಂದು ಪರಿಗಣಿಸಬಹುದೋ ಆ,-

(ಎ) ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರು ಅಥವಾ ಅವನ ನಾಮನಿರ್ದೇಶಿತನನ್ನು; ಅಥವಾ

(ಬಿ) ಭಾರತದ ಸರ್ವೆಯರ್ ಜನರಲ್ ಅಥವಾ ಅವನ ನಾಮ ನಿರ್ದೇಶಿತನನ್ನು; ಅಥವಾ

(ಸಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾರೇ ಇತರ ಅಧಿಕಾರಿಯನ್ನು; ಅಥವಾ

(ಡಿ) ಭೌಗೋಳಿಕ ಮಾಹಿತಿ ವ್ಯವಸ್ಥೆಯ ಯಾರೇ ತಜ್ಞನನ್ನು; ಅಥವಾ

(ಇ) ಇತರ ಯಾರೇ ವ್ಯಕ್ತಿಯನ್ನು

– ಕರೆಸಿಕೊಳ್ಳುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಹಾಗೆ ಕರೆಸಿದ ಅಧಿಕಾರಿಗಳು ಮತ್ತು ವ್ಯಕ್ತಿಗಳು ಆಯೋಗಕ್ಕೆ ನೆರವು ನೀಡುವ ಕರ್ತವ್ಯಕ್ಕೆ ಬದ್ಧರಾಗಿರತಕ್ಕದ್ದು.

(6) ಚುನಾವಣಾ ಆಯೋಗದ ಕಾರ್ಯದರ್ಶಿಯು ಆಯೋಗದ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಆಯೋಗದ ಅಧ್ಯಕ್ಷನ ಮೇಲ್ವಿಚಾರಣೆಯಲ್ಲಿ ಚುನಾವಣಾ ಆಯೋಗದ ನೌಕರರ ನೆರವಿನೊಂದಿಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

6. **ಆಕಸ್ಮಿಕ ಖಾಲಿಸ್ಥಾನಗಳು.**– ಅಧ್ಯಕ್ಷ ಅಥವಾ ಸದಸ್ಯ ಅಥವಾ ಸಹ ಸದಸ್ಯನ ಪದವು, ಮರಣ ಅಥವಾ ರಾಜೀನಾಮೆ ಕಾರಣದಿಂದ ತೆರವಾದರೆ, 3ನೇ ಪ್ರಕರಣದ ಅಥವಾ ಸಂದರ್ಭಾನುಸಾರ 5ನೇ ಪ್ರಕರಣದ ಉಪಬಂಧಗಳ ಮೇರೆಗೆ ಮತ್ತು ಅದಕ್ಕನುಸಾರವಾಗಿ ಕೇಂದ್ರ ಸರ್ಕಾರವು ಅಥವಾ ಸಂಬಂಧಪಟ್ಟ ಸಭಾಧ್ಯಕ್ಷನು ಕಾರ್ಯಸಾಧ್ಯವಾಗಬಹುದಾದಷ್ಟು ಬೇಗನೆ ಅದನ್ನು ಭರ್ತಿಮಾಡತಕ್ಕದ್ದು.

7. **ಆಯೋಗದ ಕಾರ್ಯವಿಧಾನ ಮತ್ತು ಅಧಿಕಾರಗಳು.**– (1) ಆಯೋಗವು ತನ್ನದೇ ಆದ ಕಾರ್ಯವಿಧಾನವನ್ನು ನಿರ್ಧರಿಸತಕ್ಕದ್ದು ಮತ್ತು ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ, ದಾವೆಯ ಅಧಿವಿಚಾರಣೆ ನಡೆಸುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಸಾಕ್ಷಿಗಳನ್ನು ಸಮನು ಮಾಡುವುದು ಮತ್ತು ಅವರ ಹಾಜರಾತಿಯನ್ನು ಒತ್ತಾಯಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು ಅಗತ್ಯ ಪಡಿಸುವುದು; ಮತ್ತು

(ಸಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಕಡ್ಡಾಯವಾಗಿ ಕೋರುವುದು.

(2) ಆಯೋಗದ ಪರಿಶೀಲನೆಯಲ್ಲಿರುವ ಯಾವುದೇ ವಿಷಯಕ್ಕೆ ಉಪಯುಕ್ತವೆಂದು ಅಥವಾ ಸುಸಂಬದ್ಧವೆಂದು ಆಯೋಗವು ಅಭಿಪ್ರಾಯಪಡುವಂಥ ಅಂಶಗಳ ಅಥವಾ ವಿಷಯದ ಮೇಲೆ ಯಾವುದೇ ಮಾಹಿತಿಯನ್ನು ಒದಗಿಸುವಂತೆ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸುವ ಅಧಿಕಾರವನ್ನು ಆಯೋಗವು ಹೊಂದಿರತಕ್ಕದ್ದು.

(3) ಆಯೋಗವು (1)ನೇ ಉಪಪ್ರಕರಣದ ಮತ್ತು (2)ನೇ ಉಪಪ್ರಕರಣದ (ಎ)ಯಿಂದ (ಸಿ) ಖಂಡಗಳವರೆಗೆ ತನಗೆ ಪ್ರದತ್ತವಾಗಿರುವ ಯಾವುವೇ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಯಾರೇ ತನ್ನ ಸದಸ್ಯರನ್ನು ಅಧಿಕೃತ ಗೊಳಿಸಬಹುದು

ಮತ್ತು ಈ ಸಂಬಂಧದಲ್ಲಿ ಆಯೋಗವು ಅಧಿಕೃತಗೊಳಿಸಿದ ಸದಸ್ಯನು ಆ ಯಾವುವೇ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಯಾವುದೇ ಆದೇಶವನ್ನು ಅಥವಾ ಮಾಡಿದ ಕಾರ್ಯವನ್ನು ಸಂದರ್ಭಾನುಸಾರ, ಆಯೋಗದ ಆದೇಶ ಅಥವಾ ಕಾರ್ಯ ಎಂಬುದಾಗಿ ಭಾವಿಸತಕ್ಕದ್ದು.

(4) ಸದಸ್ಯರ ನಡುವೆ ಭಿನ್ನಾಭಿಪ್ರಾಯವುಂಟಾದರೆ, ಬಹುಮತದ ಅಭಿಪ್ರಾಯವು ಪ್ರಭಾವವುಳ್ಳದ್ದಾಗಿರತಕ್ಕದ್ದು ಮತ್ತು ಆಯೋಗದ ಕಾರ್ಯಗಳು ಮತ್ತು ಆದೇಶಗಳನ್ನು ಬಹುಮತದ ಅಭಿಪ್ರಾಯದಂತೆ ವ್ಯಕ್ತಪಡಿಸತಕ್ಕದ್ದು.

(5) ಆಯೋಗವು ಹಾಗೂ ಸಹ ಸದಸ್ಯರ ಯಾವುದೇ ಸಮೂಹವು, ಒಬ್ಬ ಸದಸ್ಯನ ಅಥವಾ ಸಹ ಸದಸ್ಯನ ತಾತ್ಕಾಲಿಕ ಗೈರುಹಾಜರಿ ಅಥವಾ ಆಯೋಗದಲ್ಲಿ ಅಥವಾ ಆ ಸಹ ಸದಸ್ಯರ ಅಥವಾ ಸಹ ಸದಸ್ಯರ ಯಾವುದೇ ಇತರ ಸಮೂಹದಲ್ಲಿ ಖಾಲಿಸ್ಥಾನ ಏನೇ ಇದ್ದರೂ, ಕಾರ್ಯನಿರ್ವಹಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆಯೋಗದ ಅಥವಾ ಸಹ ಸದಸ್ಯರ ಸಮೂಹದ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು, ಅಂಥ ತಾತ್ಕಾಲಿಕ ಗೈರುಹಾಜರಿಯ ಅಥವಾ ಅಂಥ ಖಾಲಿಸ್ಥಾನದ ಇರುವಿಕೆಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ ಅಥವಾ ಅದನ್ನು ಪ್ರಶ್ನಿಸತಕ್ಕದ್ದಲ್ಲ.

(6) ಆಯೋಗವನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 345 ಮತ್ತು 346ನೇ ಪ್ರಕರಣಗಳ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**ವಿವರಣೆ.–** ಸಾಕ್ಷಿಗಳ ಹಾಜರಾತಿಯನ್ನು ಒತ್ತಾಯಿಸುವ ಉದ್ದೇಶಗಳಿಗಾಗಿ, ಆಯೋಗದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು ಭಾರತದ ರಾಜ್ಯಕ್ಷೇತ್ರದ ಪರಿಮಿತಿಗಳಾಗಿರತಕ್ಕದ್ದು.

**8. ಸ್ಥಾನಗಳ ಸಂಖ್ಯೆಯ ಮರುಹೊಂದಾಣಿಕೆ.–** ಆಯೋಗವು, 81, 170, 330 ಮತ್ತು 332ನೇ ಅನುಚ್ಛೇದಗಳ ಉಪಬಂಧಗಳನ್ನು ಮತ್ತು ದೆಹಲಿ-ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರವನ್ನು ಹೊರತುಪಡಿಸಿ, ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಒಕ್ಕೂಟ ರಾಜ್ಯಕ್ಷೇತ್ರಗಳ ಸರ್ಕಾರ ಅಧಿನಿಯಮ, 1963ರ (1963ರ 20) 3 ಮತ್ತು 39ನೇ ಪ್ರಕರಣಗಳನ್ನು ಮತ್ತು ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರದ ಸಂಬಂಧದಲ್ಲಿ, 239ಎಎ ಅನುಚ್ಛೇದದ (2)ನೇ ಖಂಡದ (ಬಿ) ಉಪಖಂಡವನ್ನು ಗಮನದಲ್ಲಿಟ್ಟುಕೊಂಡು, ಆದೇಶದ ಮೂಲಕ,–

(ಎ) 1971ನೇ ವರ್ಷದಲ್ಲಿ ನಡೆಸಿದ ಜನಗಣತಿಯಲ್ಲಿ ಖಚಿತಪಡಿಸಿದಂತೆ ಜನಗಣತಿ ಅಂಕಿ ಅಂಶಗಳ ಆಧಾರದ ಮೇಲೆ ಮತ್ತು 4ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ರಾಜ್ಯಕ್ಕೆ ಹಂಚಬೇಕಾದ ಲೋಕಸಭೆಯಲ್ಲಿನ ಸ್ಥಾನಗಳ ಸಂಖ್ಯೆಯನ್ನು ನಿರ್ಧರಿಸತಕ್ಕದ್ದು ಮತ್ತು 2001ನೇ ವರ್ಷದಲ್ಲಿ ನಡೆಸಿದ ಜನಗಣತಿಯಲ್ಲಿ ಖಚಿತಪಡಿಸಿದಂತೆ, ಜನಗಣತಿ ಅಂಕಿ ಅಂಶದ ಆಧಾರದ ಮೇಲೆ ರಾಜ್ಯದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲಿಡಬೇಕಾದ ಸ್ಥಾನಗಳು, ಯಾವುದಾದರೂ ಇದ್ದರೆ, ಆ ಸ್ಥಾನಗಳ ಸಂಖ್ಯೆಯನ್ನು ನಿರ್ಧರಿಸತಕ್ಕದ್ದು; ಮತ್ತು

(ಬಿ) 1971ನೇ ವರ್ಷದಲ್ಲಿ ನಡೆಸಿದ ಜನಗಣತಿಯಲ್ಲಿ ಖಚಿತಪಡಿಸಿದಂತೆ ಜನಗಣತಿ ಅಂಕಿ ಅಂಶಗಳ ಆಧಾರದ ಮೇಲೆ ಮತ್ತು 4ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ರಾಜ್ಯದ ವಿಧಾನಸಭೆಗೆ ಗೊತ್ತುಪಡಿಸಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಯನ್ನು ನಿರ್ಧರಿಸತಕ್ಕದ್ದು ಮತ್ತು 2001ನೇ ವರ್ಷದಲ್ಲಿ ನಡೆಸಿದ ಜನಗಣತಿಯಲ್ಲಿ ಖಚಿತಪಡಿಸಿದಂತೆ, ಜನಗಣತಿ ಅಂಕಿ ಅಂಶಗಳ ಆಧಾರದ ಮೇಲೆ ರಾಜ್ಯದ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲಿಡಬೇಕಾದ ಸ್ಥಾನಗಳು, ಯಾವುದಾದರೂ ಇದ್ದರೆ, ಆ ಸ್ಥಾನಗಳ ಸಂಖ್ಯೆಯನ್ನು ನಿರ್ಧರಿಸತಕ್ಕದ್ದು:

ಪರಂತು, (ಬಿ) ಖಂಡದ ಮೇರೆಗೆ ಯಾವುದೇ ರಾಜ್ಯದ ವಿಧಾನಸಭೆಗೆ ಗೊತ್ತುಪಡಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು, (ಎ) ಖಂಡದ ಮೇರೆಗೆ ಆ ರಾಜ್ಯಕ್ಕೆ ಹಂಚಿದ ಲೋಕಸಭೆಯ ಸ್ಥಾನಗಳ ಸಂಖ್ಯೆಯ ಅವಿಭಾಜ್ಯ ಗುಣಕವಾಗಿರತಕ್ಕದ್ದು.

**9. ಚುನಾವಣಾ ಕ್ಷೇತ್ರಗಳ ಸೀಮಾನಿರ್ಣಯ.–** (1) ಆಯೋಗವು, ಇಲ್ಲಿ ಉಪಬಂಧಿಸಿದ ರೀತಿಯಲ್ಲಿ, ತದನಂತರ, 1971ರ ಜನಗಣತಿಯ ಆಧಾರದ ಮೇಲೆ ಏಕಸದಸ್ಯ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಗೆ ಮರು ಹೊಂದಾಣಿಕೆ ಮಾಡಿದಂತೆ

ಪ್ರತಿಯೊಂದು ರಾಜ್ಯಕ್ಕೆ ಹಂಚಿದ ಲೋಕಸಭೆಯಲ್ಲಿನ ಸ್ಥಾನಗಳನ್ನು ಮತ್ತು ಪ್ರತಿಯೊಂದು ರಾಜ್ಯದ ವಿಧಾನಸಭೆಗೆ ಗೊತ್ತುಪಡಿಸಿದ ಸ್ಥಾನಗಳನ್ನು ವಿಂಗಡಿಸತಕ್ಕದ್ದು ಮತ್ತು ಸಂವಿಧಾನದ ಉಪಬಂಧಗಳನ್ನು, 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮದ ಉಪಬಂಧಗಳನ್ನು ಹಾಗೂ ಈ ಮುಂದಿನ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು, 2001 ರಲ್ಲಿ ನಡೆಸಿದ ಜನಗಣತಿಯಲ್ಲಿ ಖಚಿತಪಡಿಸಿದಂತೆ ಜನಗಣತಿ ಅಂಕಿ ಅಂಶಗಳ ಆಧಾರದ ಮೇಲೆ ಅವುಗಳ ಸೀಮಾ ನಿರ್ಣಯ ಮಾಡತಕ್ಕದ್ದು, ಎಂದರೆ:-

(ಎ) ಎಲ್ಲ ಚುನಾವಣಾ ಕ್ಷೇತ್ರಗಳು, ಸಾಧ್ಯವಾದಷ್ಟು ಮಟ್ಟಿಗೆ ಭೌಗೋಳಿಕವಾಗಿ ನಿಬಿಡವಾದ ಪ್ರದೇಶಗಳಾಗಿರತಕ್ಕದ್ದು ಮತ್ತು ಅವುಗಳ ಸೀಮಾ ನಿರ್ಣಯ ಮಾಡುವಾಗ, ಭೌತಿಕ ಲಕ್ಷಣಗಳನ್ನು, ಅಸ್ತಿತ್ವದಲ್ಲಿರುವ ಆಡಳಿತಾತ್ಮಕ ಘಟಕಗಳ ಗಡಿರೇಖೆಗಳನ್ನು, ಸಂಪರ್ಕ ಸೌಲಭ್ಯಗಳು ಮತ್ತು ಸಾರ್ವಜನಿಕ ಅನುಕೂಲಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು;

(ಬಿ) ಪ್ರತಿಯೊಂದು ವಿಧಾನ ಸಭಾ ಚುನಾವಣಾ ಕ್ಷೇತ್ರವನ್ನು, ಅದು ಒಂದು ಸಂಸದೀಯ ಚುನಾವಣಾ ಕ್ಷೇತ್ರದೊಳಗೆ ಸಂಪೂರ್ಣವಾಗಿ ಬರುವಂತೆ ಸೀಮಾ ನಿರ್ಣಯ ಮಾಡತಕ್ಕದ್ದು;

(ಸಿ) ಅನುಸೂಚಿತ ಜಾತಿಗಳಿಗೆ ಮೀಸಲಿಟ್ಟ ಸ್ಥಾನಗಳ ಚುನಾವಣಾ ಕ್ಷೇತ್ರಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ವಿಂಗಡಿಸತಕ್ಕದ್ದು ಮತ್ತು ಅವು ಸಾಧ್ಯವಾದಷ್ಟು ಮಟ್ಟಿಗೆ ಅವರ ಜನಸಂಖ್ಯೆಯ ಪ್ರಮಾಣವನ್ನು ಒಟ್ಟು ಜನ ಸಂಖ್ಯೆಗೆ ಹೋಲಿಸಿದಾಗ ಅಧಿಕವಾಗಿರುವ ಪ್ರದೇಶಗಳಲ್ಲಿರತಕ್ಕದ್ದು;

(ಡಿ) ಅನುಸೂಚಿತ ಪಂಗಡಗಳಿಗೆ ಮೀಸಲಿಟ್ಟ ಸ್ಥಾನಗಳ ಚುನಾವಣಾ ಕ್ಷೇತ್ರಗಳು ಸಾಧ್ಯವಾದಷ್ಟು ಮಟ್ಟಿಗೆ, ಅವರ ಜನಸಂಖ್ಯಾ ಪ್ರಮಾಣವು ಒಟ್ಟು ಜನಸಂಖ್ಯೆಗಿಂತ ಅತ್ಯಧಿಕವಾಗಿರುವ ಪ್ರದೇಶಗಳಲ್ಲಿ ಇರತಕ್ಕದ್ದು.

(2) ಆಯೋಗವು,-

(ಎ) ಯಾರೇ ಸಹ ಸದಸ್ಯನ ಅಸಮ್ಮತಿಯ ಪ್ರಸ್ತಾವನೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಪ್ರಕಟಿಸಲು ಅವರು ಇಚ್ಛಿಸಿದಲ್ಲಿ, ಅದರೊಂದಿಗೆ, ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯದ ಬಗ್ಗೆ ತನ್ನ ಪ್ರಸ್ತಾವನೆಗಳನ್ನು ಭಾರತ ರಾಜಪತ್ರದಲ್ಲಿ ಹಾಗೂ ಸಂಬಂಧಪಟ್ಟ ಎಲ್ಲ ರಾಜ್ಯಗಳ ರಾಜಪತ್ರಗಳಲ್ಲಿ ಹಾಗೂ ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ರೀತಿಯಲ್ಲೂ ಸಹ ಪ್ರಕಟಿಸತಕ್ಕದ್ದು;

(ಬಿ) ಯಾವ ದಿನಾಂಕದಂದು ಅಥವಾ ದಿನಾಂಕದ ನಂತರ ಪ್ರಸ್ತಾವನೆಗಳನ್ನು ತಾನು ಮತ್ತೊಮ್ಮೆ ಪರಿಗಣಿಸತಕ್ಕದೋ ಆ ದಿನಾಂಕವನ್ನು ನಿರ್ದಿಷ್ಟಪಡಿಸತಕ್ಕದ್ದು;

(ಸಿ) ತಾನು ಸ್ವೀಕರಿಸಬಹುದಾದ ಎಲ್ಲ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಹಾಗೆ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಪರ್ಯಾಲೋಚಿಸತಕ್ಕದ್ದು ಮತ್ತು ಅಂಥ ಪರ್ಯಾಲೋಚನೆಯ ಉದ್ದೇಶಗಳಿಗಾಗಿ, ತಾನು ಸೂಕ್ತವೆಂದು ಭಾವಿಸಬಹುದಾದಂತೆ ಪ್ರತಿಯೊಂದು ರಾಜ್ಯದಲ್ಲಿ ಅಂಥ ಸ್ಥಳ ಅಥವಾ ಸ್ಥಳಗಳಲ್ಲಿ ಒಂದು ಅಥವಾ ಹೆಚ್ಚಿನ ಸಾರ್ವಜನಿಕ ಉಪವೇಶನಗಳನ್ನು ನಡೆಸತಕ್ಕದ್ದು; ಮತ್ತು

(ಡಿ) ತದನಂತರ ಒಂದು ಅಥವಾ ಹೆಚ್ಚಿನ ಆದೇಶಗಳ ಮೂಲಕ,-

(i) ಪ್ರತಿಯೊಂದು ರಾಜ್ಯದ ಸಂಸದೀಯ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ; ಮತ್ತು

(ii) ಪ್ರತಿಯೊಂದು ರಾಜ್ಯದ ವಿಧಾನಸಭಾ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ

– ಮಾಡತಕ್ಕದ್ದು.

**10. ಆದೇಶಗಳ ಪ್ರಕಟಣೆ ಮತ್ತು ಅವುಗಳನ್ನು ಜಾರಿಗೊಳಿಸುವ ದಿನಾಂಕ.**-(1) ಆಯೋಗವು, 8ನೇ ಅಥವಾ 9ನೇ ಪ್ರಕರಣದ ಮೇರೆಗೆ ಮಾಡಿದ ತನ್ನ ಪ್ರತಿಯೊಂದು ಆದೇಶಗಳನ್ನು ಭಾರತ ರಾಜಪತ್ರದಲ್ಲಿ ಮತ್ತು ಸಂಬಂಧಪಟ್ಟ ರಾಜ್ಯಗಳ

ರಾಜಪತ್ರದಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ಏಕಕಾಲದಲ್ಲಿ ಅಂತಹ ಆದೇಶಗಳನ್ನು ಕನಿಷ್ಠ ಎರಡು ದೇಶೀಯ ಭಾಷೆಗಳ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಹಾಗೂ ರೇಡಿಯೋ, ದೂರದರ್ಶನ ಹಾಗೂ ಸಾರ್ವಜನಿಕರಿಗೆ ಲಭ್ಯವಿರುವ ಇತರ ಸಾಧ್ಯವಿರುವ ಮಾಧ್ಯಮದಲ್ಲಿ ಪ್ರಸಾರ ಮಾಡುವಂತೆ ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ರಾಜ್ಯಗಳ ರಾಜಪತ್ರದಲ್ಲಿ ಅಂತಹ ಪ್ರಕಟಣೆಯ ನಂತರ, ಪ್ರತಿ ಜಿಲ್ಲಾ ಚುನಾವಣಾ ಅಧಿಕಾರಿಯು, ತನ್ನ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಬರುವ ಪ್ರದೇಶಕ್ಕೆ ಸಂಬಂಧಿಸಿದಂಥ ಆದೇಶಗಳ ರಾಜಪತ್ರದ ಪ್ರತಿಯನ್ನು, ಸಾರ್ವಜನಿಕ ಸೂಚನೆಗಾಗಿ, ತನ್ನ ಕಚೇರಿಯ ಎದ್ದು ಕಾಣುವ ಭಾಗದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(2) ಪ್ರತಿಯೊಂದು ಅಂಥ ಆದೇಶವನ್ನು ಭಾರತ ರಾಜಪತ್ರದಲ್ಲಿ ಪ್ರಕಟಿಸಿದ ಮೇಲೆ, ಅದು ಕಾನೂನು ಬಲ ಹೊಂದಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(3) ಅಂಥ ಪ್ರಕಟಣೆಯ ನಂತರ ಸಾಧ್ಯವಾದಷ್ಟು ಬೇಗನೆ, ಪ್ರತಿಯೊಂದು ಅಂಥ ಆದೇಶವನ್ನು, ಲೋಕಸಭೆಯ ಹಾಗೂ ಸಂಬಂಧಪಟ್ಟ ರಾಜ್ಯಗಳ ವಿಧಾನಸಭೆಗಳ ಮುಂದೆ ಇರಿಸತಕ್ಕದ್ದು.

(4) (5)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಲೋಕಸಭೆಯಲ್ಲಿ ಅಥವಾ ಒಂದು ರಾಜ್ಯದ ವಿಧಾನಸಭೆಯಲ್ಲಿ ಅನೇಕ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಪ್ರಾತಿನಿಧ್ಯದ ಮರುಹೊಂದಾಣಿಕೆಯು ಹಾಗೂ ಯಾವುದೇ ಅಂಥ ಆದೇಶದಲ್ಲಿ ಉಪಬಂಧಿಸಿದ ಆ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯವು ಆ ಆದೇಶವನ್ನು ಭಾರತ ರಾಜಪತ್ರದಲ್ಲಿ ಪ್ರಕಟಿಸಿದ ನಂತರ ನಡೆಸುವ, ಸಂದರ್ಭಾನುಸಾರ, ಲೋಕಸಭೆಯ ಅಥವಾ ವಿಧಾನಸಭೆಯ ಪ್ರತಿಯೊಂದು ಚುನಾವಣೆಗೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಅಂಥ ಕಾನೂನಿನ ಮೇರೆಗೆ ಹೊರಡಿಸಿದ ಯಾವುದೇ ಆದೇಶ ಅಥವಾ ಅಧಿಸೂಚನೆಯಲ್ಲಿ ಒಳಗೊಂಡ ಅಂಥ ಪ್ರಾತಿನಿಧ್ಯ ಮತ್ತು ಸೀಮಾನಿರ್ಣಯಕ್ಕೆ ಸಂಬಂಧಿಸಿದ ಉಪಬಂಧಗಳು, ಅಂಥ ಪ್ರಾತಿನಿಧ್ಯ ಮತ್ತು ಸೀಮಾನಿರ್ಣಯವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ ಆ ಉಪಬಂಧಗಳ ರದ್ದಿಯಾತಿಗೂ ಸಹ ಅನ್ವಯವಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ ಜಾರ್ಖಂಡ್ ರಾಜ್ಯಕ್ಕೆ ಸಂಬಂಧಪಟ್ಟಂತೆ ಪ್ರಕಟಿಸಿದ ಸೀಮಾನಿರ್ಣಯ ಆದೇಶಕ್ಕೆ ಅನ್ವಯವಾಗತಕ್ಕದ್ದಲ್ಲ.

(5) ಈ ಪ್ರಕರಣದಲ್ಲಿರುವುದು ಯಾವುದೂ, ಸಂದರ್ಭಾನುಸಾರ, ರಾಜ್ಯದ ಸಂಸದೀಯ ಚುನಾವಣಾ ಕ್ಷೇತ್ರಗಳ ಅಥವಾ ವಿಧಾನಸಭಾ ಚುನಾವಣಾ ಕ್ಷೇತ್ರಗಳ ಸೀಮಾನಿರ್ಣಯಕ್ಕೆ ಸಂಬಂಧಿಸಿದಂತೆ ಆಯೋಗದ ಅಂತಿಮ ಆದೇಶ ಅಥವಾ ಆದೇಶಗಳು ಭಾರತ ರಾಜಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಂದು, ಸಂದರ್ಭಾನುಸಾರ, ಅಸ್ತಿತ್ವದಲ್ಲಿರುವ ಲೋಕಸಭೆಯ ಅಥವಾ ವಿಧಾನಸಭೆಯ ವಿಸರ್ಜನೆಯವರೆಗೆ, ಆ ರಾಜ್ಯದ ಲೋಕಸಭೆಯಲ್ಲಿನ ಅಥವಾ ವಿಧಾನಸಭೆಯಲ್ಲಿನ ಪ್ರಾತಿನಿಧ್ಯಕ್ಕೆ ಬಾಧಕ ಉಂಟುಮಾಡತಕ್ಕದ್ದಲ್ಲ ಮತ್ತು ಅಂತಹ ಲೋಕಸಭೆಯಲ್ಲಿನ ಅಥವಾ ಅಂಥ ಯಾವುದೇ ಸಭೆಯಲ್ಲಿನ ಯಾವುದೇ ಖಾಲಿಸ್ಥಾನವನ್ನು ಭರ್ತಿಮಾಡುವುದಕ್ಕೆ ಯಾವುದೇ ಉಪಚುನಾವಣೆಯನ್ನು, ಕಾನೂನುಗಳನ್ನು ಮತ್ತು ಆದೇಶಗಳ ಉಪಬಂಧಗಳನ್ನು ರದ್ದುಗೊಳಿಸಿರದಿದ್ದರೆ ಹೇಗೋ ಹಾಗೆ (4)ನೇ ಉಪಪ್ರಕರಣದ ಮೂಲಕ ರದ್ದುಗೊಳಿಸಿದ ಕಾನೂನಿನ ಮತ್ತು ಆದೇಶಗಳ ಉಪಬಂಧಗಳ ಆಧಾರದ ಮೇಲೆ ನಡೆಸತಕ್ಕದ್ದು.

(6) ಆಯೋಗವು, 3ನೇ ಪ್ರಕರಣದ ಮೇರೆಗೆ ಆಯೋಗವು ರಚನೆಯಾದ ಎರಡು ವರ್ಷಗಳೊಳಗೆ, ಆ ಉಪಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ತನ್ನ ಪ್ರತಿಯೊಂದು ಆದೇಶವನ್ನು ಪೂರ್ಣಗೊಳಿಸಲು ಮತ್ತು ಪ್ರಕಟಿಸಲು ಪ್ರಯತ್ನಿಸತಕ್ಕದ್ದು.

**10ಎ. ಕೆಲವೊಂದು ಪ್ರಕರಣಗಳಲ್ಲಿ ಸೀಮಾ ನಿರ್ಣಯದ ಮುಂದೂಡಿಕೆ.–** (1) 4, 8 ಮತ್ತು 9ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಭಾರತದ ಏಕತೆ ಮತ್ತು ಅಖಂಡತೆಗೆ ಬೆದರಿಕೆಯೊಡ್ಡುವಂಥ ಸನ್ನಿವೇಶವು ಉದ್ಭವಿಸಿದೆಯೆಂದು ಅಥವಾ ಶಾಂತಿ ಮತ್ತು ಸುವ್ಯವಸ್ಥೆಗೆ ಗಂಭೀರ ಬೆದರಿಕೆ ಉಂಟಾಗಿದೆ ಎಂದು ರಾಷ್ಟ್ರಪತಿಗೆ ಮನದಟ್ಟಾದರೆ ಅವನು, ಆದೇಶದ ಮೂಲಕ ಒಂದು ರಾಜ್ಯದಲ್ಲಿನ ಸೀಮಾ ನಿರ್ಣಯ ಪ್ರಕ್ರಿಯೆಯನ್ನು ಮುಂದೂಡಬಹುದು.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು.

**10ಬಿ. ಜಾರ್ಖಂಡ್ ರಾಜ್ಯಕ್ಕೆ ಸಂಬಂಧಪಟ್ಟಂತೆ ಸೀಮಾ ನಿರ್ಣಯ ಆದೇಶವು ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ.–** 10ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸದರಿ ಪ್ರಕರಣದ ಮೇರೆಗೆ ಪ್ರಕಟಿಸಿದ ಜಾರ್ಖಂಡ್ ರಾಜ್ಯದ ಸಂಬಂಧದಲ್ಲಿ ಸ್ಥಾನಗಳ ಮರುಹೊಂದಾಣಿಕೆ ಮತ್ತು ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯದ ಅಂತಿಮ ಆದೇಶವು (ಆದೇಶ ಸಂಖ್ಯೆ 63 (ಇ) ದಿನಾಂಕ 30ನೇ ಏಪ್ರಿಲ್ 2007 ಮತ್ತು ಓಎನ್ 110 (ಇ) ದಿನಾಂಕ 17ನೇ ಆಗಸ್ಟ್, 2007 ನೋಡಿ.) ಯಾವುದೇ ಕಾನೂನಿನ ಪರಿಣಾಮ ಹೊಂದಿರತಕ್ಕದ್ದಲ್ಲ. ಸದರಿ ಆದೇಶದ ಪ್ರಕಟಣೆಗೆ ಮುಂಚೆ ಇದ್ದಂತೆ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯವು, ಸೀಮಾನಿರ್ಣಯ (ತಿದ್ದುಪಡಿ) ಅಧಿನಿಯಮ, 2008ರ ಪ್ರಾರಂಭದ ತರುವಾಯ ನಡೆಯುವ ಲೋಕಸಭೆಯ ಅಥವಾ ಸಂದರ್ಭಾನುಸಾರ ಆ ರಾಜ್ಯದ ವಿಧಾನ ಸಭೆಯ ಪ್ರತಿಯೊಂದು ಚುನಾವಣೆಯ ಸಂಬಂಧದಲ್ಲಿ 2020ನೇ ಇಸವಿಯವರೆಗೆ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

**11. ಸೀಮಾ ನಿರ್ಣಯ ಆದೇಶಗಳನ್ನು ತಹಲ್‌ವರೆಗೆ ನಿರ್ವಹಿಸಿಕೊಂಡು ಬರಲು ಅಧಿಕಾರ.–** (1) ಚುನಾವಣಾ ಆಯೋಗವು, ಕಾಲಕಾಲಕ್ಕೆ, ಭಾರತ ರಾಜಪತ್ರದಲ್ಲಿ ಮತ್ತು ಸಂಬಂಧಪಟ್ಟ ರಾಜ್ಯದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,–

(ಎ) 9ನೇ ಪ್ರಕರಣದ ಮೇರೆಗೆ ಆಯೋಗವು ಮಾಡಿದ ಯಾವುದೇ ಆದೇಶದಲ್ಲಿರುವ ಯಾವುದೇ ಮುದ್ರಣ ದೋಷವನ್ನು ಅಥವಾ ಅಜಾಗರೂಕತೆಯಿಂದ ಅಥವಾ ಲೋಪದ ಕಾರಣದಿಂದಾದ ಯಾವುದೇ ತಪ್ಪನ್ನು ಸರಿಪಡಿಸಬಹುದು; ಮತ್ತು

(ಬಿ) ಯಾವುದೇ ಸದರಿ ಆದೇಶಗಳಲ್ಲಿ ನಮೂದಿಸಿದ ಯಾವುದೇ ಜಿಲ್ಲೆಯ ಅಥವಾ ಯಾವುದೇ ಪ್ರಾದೇಶಿಕ ವಿಭಾಗದ ಗಡಿಗಳನ್ನು ಅಥವಾ ಹೆಸರನ್ನು ಮಾರ್ಪಾಟುಗೊಳಿಸುವಲ್ಲಿ, ಆದೇಶಗಳನ್ನು ತಹಲ್‌ವರೆಗೆ ಇಟ್ಟುಕೊಂಡು ಬರುವುದಕ್ಕಾಗಿ ಅವಶ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವಂತಹ ತಿದ್ದುಪಡಿಗಳನ್ನು ಮಾಡಬಹುದು, ಆದಾಗ್ಯೂ, ಯಾವುದೇ ಚುನಾವಣಾ ಕ್ಷೇತ್ರದ ಗಡಿಗಳನ್ನು ಅಥವಾ ಪ್ರದೇಶಗಳನ್ನು ಅಥವಾ ವ್ಯಾಪ್ತಿಯನ್ನು ಅಂಥ ಯಾವುದೇ ಅಧಿಸೂಚನೆಯ ಮೂಲಕ ಬದಲಾವಣೆ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಲೋಕಸಭೆಯ ಮತ್ತು ಸಂಬಂಧಪಟ್ಟ ರಾಜ್ಯದ ವಿಧಾನಸಭೆಯ ಮುಂದೆ ಇರಿಸತಕ್ಕದ್ದು.

**12. ನಿರಸನ.–** ಸೀಮಾ ನಿರ್ಣಯ ಅಧಿನಿಯಮ, 1972 (1972ರ 76) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

* * * * *